


ಭಕ್ತ ಅಭಿರಾಮ ಭಟ್ಟ
ಕಥೆ: ಜನ
ಚಿತ್ರ: ರಮಣಿ
ತಮಿಳುನಾಡಿನ ತಿರುಕ್ಕಡಯೂರು ಎಂಬ ಗ್ರಾಮದಲ್ಲಿ ಅಭಿರಾಮ ಭಟ್ಟನ ಜನನವಾಯಿತು. ಅವನ ತಂದೆತಾಯಿಗಳು ಸುಶಿಕ್ಷಿತ, ನಿಷ್ಠಾವಂತ ಹಾಗೂ ಭಕ್ತಿಯಿಂದ ಕೂಡಿದ ಬ್ರಾಹ್ಮಣರಾಗಿದ್ದರು. ಚಿಕ್ಕವಯಸ್ಸಿನಲ್ಲೇ ಅಭಿರಾಮ ಭಟ್ಟನಿಗೆ ಸಂಗೀತದಲ್ಲಿ ಪ್ರತಿಭೆಯಿತ್ತು. ದೇವಿಯ ಒಂದು ರೂಪವಾದ ಅಭಿರಾಮಿಯನ್ನು ಚಿಕ್ಕಂದಿನಿಂದಲೇ ಪೂಜಿಸುತ್ತಿದ್ದ.
1
ಅವನು ಯಾವಾಗಲೂ ದೇವರ ಧ್ಯಾನದಲ್ಲೇ ಕಾಲ ಕಳೆಯುತ್ತಾ ಹೊರಗಿನ ಪ್ರಪಂಚದ ಅರಿವೇ ಇಲ್ಲದೇ ಇರುತ್ತಿದ್ದುದರಿಂದ ಜನರು ಅವನನ್ನು ಹುಚ್ಚನೆಂದು ಹೀಯಾಳಿಸುತ್ತಿದ್ದರು.
ಅವನು ಯಾರೋ ಅಜ್ಞಾತ ದೇವತೆಯನ್ನು ಪೂಜಿಸುತ್ತಾನೆ, ಬುದ್ಧಿಯಿಲ್ಲದವನು!
ಗೊತ್ತುಗುರಿಯಿಲ್ಲದೆ ಅಲೆಯುತ್ತಾನೆ. ಇವನೊಬ್ಬ ಹುಚ್ಚ.
2
ತಂಜಾವೂರನ್ನು ಆಗ ಸುರಭೋಜ ಎಂಬ ರಾಜ ಆಳುತ್ತಿದ್ದ. ಒಮ್ಮೆ ಜನವರಿ ತಿಂಗಳಲ್ಲಿ ಅಮಾವಾಸ್ಯೆಯಂದು, ಕಾವೇರಿ ಪಟ್ಟಣದ ಸಮುದ್ರದಲ್ಲಿ ಸ್ನಾನ ಮಾಡಿ ತಿರುಕ್ಕಡಯೂರಿಗೆ ಬಂದನು.
3


ರಾಜನು ಪೂಜಿಸಲು ದೇವಸ್ಥಾನಕ್ಕೆ ಬಂದಾಗ, ಅಲ್ಲಿ ಅಭಿರಾಮಿ ಭಟ್ಟನು ದೇವರ ಧ್ಯಾನದಲ್ಲಿ ಸಂಪೂರ್ಣವಾಗಿ ಮಗ್ನನಾಗಿರುವುದನ್ನು ನೋಡಿದನು.
ಅವನು ಯಾರು?
ಅವನೊಬ್ಬ ಹುಚ್ಚ. ಅವನಿಗೆ ವೇದಗಳಲ್ಲಿ ನಂಬಿಕೆಯಿಲ್ಲ. ಯಾವಾಗಲೂ ತಾಂತ್ರಿಕ ಪೂಜೆಯಲ್ಲಿ ನಿರತನಾಗಿರುತ್ತಾನೆ.
ಅಭಿರಾಮಿ, ಎಂದು ಯಾವುದೋ ದೇವತೆಯನ್ನು ಪೂಜಿಸುತ್ತಾನೆ.
4
ಆದರೆ ಯಾಕೋ ರಾಜನಿಗೆ ಅವನಲ್ಲಿ ತುಂಬಾ ಆಕರ್ಷಣೆಯುಂಟಾಯಿತು. ಅವನೊಡನೆ ಏನಾದರೂ ಮಾತಾಡಬೇಕೆನಿಸಿತು.
ಭಟ್ಟಾ, ಇಂದು ಯಾವ ದಿನ?
5
ದೇವಿ ಆಭಿರಾಮಿಯ ಪ್ರಕಾಶದೆಡೆ ನೋಡುತ್ತಾ ಹೇಳಿದನು.....
ಇಂದು ಪೂರ್ಣಿಮೆ.
ಎಲ್ಲರೂ ನಿನ್ನ ಹುಚ್ಚ ಎನ್ನುತ್ತಾರೆ. ಅದು ಸರಿಯಾಯಿತು.
6
ರಾಜ ಅಲ್ಲಿಂದ ಹೋದ ಮೇಲೆ ಅಭಿರಾಮಿ ಭಟ್ಟನಿಗೆ ತಾನು ಅಮಾವಾಸ್ಯೆಯ ದಿನವನ್ನು ಪೂರ್ಣಿಮೆ ಎಂದು ಹೇಳಿದುದರ ತಪ್ಪಿನ ಅರ್ಥವಾಯಿತು.
ತಾಯೇ! ನೀನು ನನ್ನನ್ನು ಕಾಪಾಡಬೇಕು.
7


ದೇವಸ್ಥಾನದಲ್ಲಿ ಅವನು ಒಂದು ಆಳವಾದ ಗುಂಡಿಯನ್ನು ತೋಡಿದನು. ಆ ಗುಂಡಿಯಲ್ಲಿ ಬೆಂಕಿಯನ್ನು ತುಂಬಿದನು. ಒಂದು ನೂರು ಹಗ್ಗಗಳ ಆಧಾರದಿಂದ ಒಂದು ಹಲಗೆಯನ್ನು ತೂಗು ಹಾಕಿ ಅದರ ಮೇಲೆ ಕುಳಿತು ಧ್ಯಾನ ಮಾಡಲು ಆರಂಭಿಸಿದನು.
ಓ ತಾಯೇ! ನೀನು ಅತೀವ ಶಕ್ತಿಯುಳ್ಳವಳು. ನಾನು ಹೇಳಿದ್ದನ್ನು ನಿಜವಾಗಿಸು. ಇಂದು ಪೂರ್ಣಿಮೆಯಾಗಲಿ. ಇಲ್ಲದಿದ್ದಲ್ಲಿ ನಾನು ಈ ಬೆಂಕಿಗೆ ಧುಮುಕಿ ಸಾಯುತ್ತೇನೆ.
8
ಆ ಹಲಗೆಯ ಮೇಲೆ ಕುಳಿತು ದೇವಿಯ ಮೇಲೆ ಸ್ತೋತ್ರವನ್ನು ರಚಿಸಿ ಹಾಡಲು ಶುರುಮಾಡಿದ. ಒಂದೊಂದು ಹಾಡು ಹಾಡುವಾಗಲೂ ಒಂದೊಂದು ಹಗ್ಗವನ್ನು ಕತ್ತರಿಸಲು ಶುರು ಮಾಡಿದ. ಅವನು ಎಪ್ಪತ್ತೊಂಭತ್ತು ಹಾಡುಗಳನ್ನು ಮುಗಿಸಿದ ನಂತರ ಪಶ್ಚಿಮದಲ್ಲಿ ಸೂರ್ಯ ಮುಳುಗಿದ. ಕತ್ತಲಾಯಿತು. ಜಗನ್ಮಾತೆ ಅವನ ಮುಂದೆ ಪ್ರತ್ಯಕ್ಷಳಾದಳು. 9
ನೀನು ನನ್ನ ಕಣ್ಣಿಗೆ ಪ್ರಕಾಶವನ್ನು ಕೊಟ್ಟೆ.
ಜಗನ್ಮಾತೆ ಅವಳ ಕಿವಿಯ ಓಲೆಯನ್ನು ತೆಗೆದು ಆಕಾಶಕ್ಕೆ ಎಸೆದಳು. ಅದು ಆಕಾಶದಲ್ಲಿ ಚಂದ್ರನಂತೆ ಹೊಳೆಯಲು ಆರಂಭಿಸಿತು.
10
ಮಗೂ, ನಾನು ನಿನ್ನ ಮಾತು ಸತ್ಯವಾಗುವಂತೆ ಮಾಡಿದೆ. ಹಾಡುವುದನ್ನು ಇನ್ನು ಮುಂದುವರಿಸು.
ಭಟ್ಟ ಹಾಡುವುದನ್ನು ಮುಂದುವರಿಸಿದ.
ಹಾ! ಹಾ! ನಿನ್ನಿಚ್ಛೆ ತಾಯಿ. ಇಂದು ನೀನು ನನ್ನನ್ನು ನಿನ್ನ ಭಕ್ತರ ಪಂಕ್ತಿಗೆ ಸೇರಿಸಿದೆ.
11


ಅಮಾವಾಸ್ಯೆಯ ದಿನ ಬೆಳದಿಂಗಳನ್ನು ನೋಡಿ ಜನ ದಂಗಾದರು.
ಅದ್ಭುತ! ಆಶ್ಚರ್ಯ! ಇದು ಭಟ್ಟನ ಪವಾಡ.
ಹಾ! ಹಾ!
ನಿಗೂಢ
12
ರಾಜ ತನ್ನ ಅರಮನೆಯಲ್ಲಿ.........
13
ಎಂತಹ ಪವಾಡವಿದು! ಜಗನ್ಮಾತೆ ಭಟ್ಟನ ಮಾತುಗಳನ್ನು ನಿಜಗೊಳಿಸಿದ್ದಾಳೆ. ಅವನನ್ನು ಅರಮನೆಗೆ ಆಹ್ವಾನಿಸಿ. ಬೇಡ. ಬೇಡ. ನಾನೆ ಅವನಿರುವಲ್ಲಿಗೆ ಹೋಗುವೆನು.
ರಾಜ ಸುರಭೋಜ, ಭಟ್ಟನಿದ್ದ ದೇವಸ್ಥಾನಕ್ಕೆ ಹೋಗಿ ಅವನ ಕಾಲಿಗೆ ಬಿದ್ದು ನಮಸ್ಕರಿಸಿದ.
ಓ ಪೂಜ್ಯರೇ, ಜಗನ್ಮಾತೆ ತಾವಾಡಿದ ಮಾತನ್ನು ಸತ್ಯಗೊಳಿಸಲು, ಅಮಾವಾಸ್ಯೆಯ ರಾತ್ರಿಯನ್ನು ಹುಣ್ಣಿಮೆಯಾಗಿ ಮಾಡಿದ್ದಾಳೆ.
ಜಗನ್ಮಾತೆಯ ಲೀಲೆಗಳು ನಿಗೂಢವಾಗಿವೆ.
14
ಭಟ್ಟನು 'ಅಭಿರಾಮಿ ಅಂಥಾದಿ'ಯನ್ನು ರಚಿಸಲು, ..ಮಹಾರಾಜ ಬೇಕಾದಷ್ಟು ಉಡುಗೊರೆಯನ್ನು ಕೊಟ್ಟನು.
ದಯವಿಟ್ಟು ಇದನ್ನು ನನ್ನ ಕಾಣಿಕೆಯಾಗಿ ಸ್ವೀಕರಿಸಿ ನನ್ನನ್ನು ಆಶೀರ್ವದಿಸಿ.
15